ಜನಪದದ ಸರಳ, ಹಗುರ, ಲವಲವಿಕೆಯ ಕಥಾನಕದಂತೆ ಕಂಡರೂ ಒಂದು ಸಂಕೀರ್ಣವಾದ ಕೊಲಾಜ್ ಚಿತ್ರವನ್ನು ಹನೂರರ ಕಾದಂಬರಿ ನಮ್ಮೆದುರಿಗಿಡುತ್ತಿದೆ. ಏಕಕಾಲಕ್ಕೆ ಹಲವು ಹತ್ತು ಸಮಸ್ಯೆಗಳ ಕುರಿತು ಮಾತನಾಡುವ ಈ ಕಾದಂಬರಿ ವಾಸ್ತವದ ಕಷ್ಟಸಾಧ್ಯ ಯಥಾವತ್ ಚಿತ್ರವನ್ನು ಕುಸುರಿ ಕಲೆಯ ನೈಪುಣ್ಯದೊಂದಿಗೆ ಮೇಳೈಸುತ್ತಿದೆ. ಹಾಗಾಗಿ, ವಸ್ತುವಿನ ನೆಲೆಯಿಂದಲಾಗಲಿ, ಕಥಾನಕದ ನೆಲೆಯಿಂದಲಾಗಲಿ ಏಕಸೂತ್ರದ ನಿರೂಪಣೆಯನ್ನು ಸಹಜವಾಗಿಯೇ ನಿರೀಕ್ಷಿಸುವ ಓದುಗನಿಗೆ ಮೇಲ್ನೋಟಕ್ಕೆ ಅದಿಲ್ಲ ಇಲ್ಲಿ ಅನಿಸಿದರೆ ಆಶ್ಚರ್ಯವಿಲ್ಲ. ಆದರೂ, ಕಾದಂಬರಿ ಓದಿ ಮುಗಿಸುವ ಹೊತ್ತಿಗೆ ಅಂಥ ಒಂದು ಏಕಸೂತ್ರ ತನ್ನಿಂತಾನಾಗಿಯೇ ಗಮನಕ್ಕೆ ಬರುತ್ತದೆ ಮಾತ್ರವಲ್ಲ ಅದನ್ನು ಹೀಗಲ್ಲದೆ ಬೇರೊಂದು ವಿಧದಲ್ಲಿ ಕಟ್ಟಿಕೊಡುವುದು ಸಾಧ್ಯವೇ ಇರಲಿಲ್ಲ ಎಂದೂ ಅನಿಸದಿರದು. ಈ ಕಾದಂಬರಿಯ ವಿಶೇಷ ಸಾಧನೆ ಎಂದರೆ ಬದುಕಿನ ಯಾವತ್ತೂ ಸಂಕೀರ್ಣ ಸ್ವರೂಪವನ್ನು ಬಿಟ್ಟುಕೊಡದೇನೆ, ಹಲವು ಕಥಾನಕಗಳ ಮುಖೇನ, ನಮ್ಮ ಕಾಲದ ಮತ್ತು ಎಲ್ಲರನ್ನೂ ಸಾರ್ವತ್ರಿಕವಾಗಿ ಬಾಧಿಸುತ್ತಿರುವ ಹಲವು ಹತ್ತು ಸಂಗತಿಗಳ ಕುರಿತು ಏಕಕಾಲಕ್ಕೆ ಪ್ರಶ್ನೆಗಳನ್ನೆತ್ತುವುದು ಸಾಧ್ಯವಾಗಿರುವುದೇ.

ಇಲ್ಲಿ ಪ್ರಾಧ್ಯಾಪಕರಿದ್ದಾರೆ, ರಾಜಕಾರಣಿಗಳಿದ್ದಾರೆ, ತಹಶೀಲ್ದಾರರಂಥ ಅಧಿಕಾರಿವರ್ಗವಿದೆ, ಪೊಲೀಸರು, ರೌಡಿಗಳು, ಕೂಲಿಯವರು, ದೊಂಬರು, ವೈದ್ಯರು, ಉದ್ಯಮಿಗಳು, ಗಾಂಧಿವಾದಿಗಳು, ದಲಿತ ಸಂಘರ್ಷ ಸಮಿತಿಯ ಹೋರಾಟಗಾರರು, ವಿವಿಧ ಭಾಷೆ ಮಾತನಾಡುವ ಜನರು, ಎಲ್ಲೆಲ್ಲಿಂದಲೋ ಬಂದು ಎಡೂರು ಮಂಗಲದಲ್ಲಿ ನೆಲೆಯಾದವರು ಇದ್ದಾರೆ. ಉಳ್ಳವರು ಶೋಷಿತರು ಇರುವಂತೆಯೇ ಬ್ರಾಹ್ಮಣರು ಮತ್ತು ಕೆಳಜಾತಿಯವರಿದ್ದಾರೆ. ಅಡುಗೆ ಮನೆಗೆ ಸೀಮಿತರಾದ ಗೃಹಿಣಿಯರೂ ಇದ್ದಾರೆ, ಹೊಸಿಲು ದಾಟಿದ ಹೆಣ್ಣುಮಕ್ಕಳೂ ಇದ್ದಾರೆ, ಸೂಳೆಯರೂ ಇದ್ದಾರೆ. ಎಲ್ಲರಿಗೂ ಯಶಸ್ಸಿನ ಕನಸಿದೆ, ಸುಖದ ಹುಡುಕಾಟವಿದೆ, ನೆಮ್ಮದಿಯ ಆಸೆಯಿದೆ. ಯಾರಲ್ಲೂ ಸಂತೃಪ್ತಿಯಿಲ್ಲ, ನೆಮ್ಮದಿಯಿಲ್ಲ, ಖುಷಿಯಂಥ ಖುಷಿಯೇನಿಲ್ಲ. ಕೈ ಮಾತ್ರ ನಿರಂತರವಾಗಿ ಚಂದ್ರನತ್ತ ಚಾಚುತ್ತಲೇ ಇದೆ. ಈ ಚಿತ್ರವನ್ನು ಹನೂರರು ಅತ್ಯಂತ ಸುಂದರವಾಗಿ ಮತ್ತು ಅಷ್ಟೇ ಸೂಕ್ಷ್ಮ ನೆಲೆಯಲ್ಲಿ ಚಿತ್ರಿಸುತ್ತ ಹೋಗುತ್ತಾರೆ.

ದೂರದ ಅಮೆರಿಕದಲ್ಲಿ, ತನ್ನದೇ ಕ್ಲಿನಿಕ್ಕಿನಲ್ಲಿ ಎಪ್ಪತ್ತರ ಆಸುಪಾಸಿನ ಸುಮನಾ ಮನವಳ್ಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವರು ಬರೆದಿಟ್ಟ ಚೀಟಿಯಲ್ಲಿನ ಕವನದಂಥ ಕವನವನ್ನು ಓದುತ್ತ ವಯೋವೃದ್ಧ ಪತಿ ಚಂದ್ರಶೇಖರ ಮನವಳ್ಳಿಯವರು ಎಲ್ಲೋ ಕಳೆದು ಹೋಗುತ್ತಾರೆ ಅಥವಾ ತಮ್ಮನ್ನು ತಾವು ಕಂಡುಕೊಳ್ಳುತ್ತಾರೆ. ಮುನಿಬೈರಪ್ಪ ದಲಿತ ಸಂಘರ್ಷ ಸಮಿತಿಯ ಹೋರಾಟಗಾರನಾಗಿದ್ದವನು. ಗದ್ದರ್ ಜೊತೆ ಓಡಾಡಿದವನು. ವಿಶಾಖಪಟ್ಟಣದ ವೈಜಾಗ್ ವಿಶ್ವವಿದ್ಯಾಲಯದ ಎದುರಿನ ಕಡಲ ಕಿನಾರೆಯಲ್ಲಿ ಮಲಗಿದ್ದ ಮುನಿಬೈರಪ್ಪನಿಗೆ ಸಿಕ್ಕಿದ ಪಾರಸಮಣಿಯ ಕತೆ ಅವನಿಗೆ ಬದುಕಿನ ಸತ್ಯದರ್ಶನ ಮಾಡಿಸುತ್ತದೆ. ಈ ಅನ್ನದ ಸಮಸ್ಯೆಯೇ ಮೂಲವಾಗಿರುವ ಮನುಷ್ಯನ ಒಟ್ಟು ಹೋರಾಟ ಯಾರ, ಯಾವುದರ ವಿರುದ್ಧ? ಅವನ ಮೌಲ್ಯಗಳ, ಆದರ್ಶಗಳ ನೆಲೆ ಏನು, ಅದರ ಮಿತಿಯೇನು ಎನ್ನುವ ಪ್ರಶ್ನೆಗಳೆಲ್ಲ ಮೈಮಾರಲು ಇಟ್ಟು ಊರಿಗೆ ಹೊರಟ ಪಾರಸಮಣಿಯ ಕತೆಯಲ್ಲಿ ಅವನಿಗೆ ಎದುರಾಗಿದೆ. ಗಂಡನನ್ನು ಬಿಟ್ಟಿರಲಾರೆ ಎಂದೇ ಬಿಹಾರದಿಂದ ಇಲ್ಲಿಯ ತನಕ ಹಸುಗೂಸನ್ನೂ ಎತ್ತಿಕೊಂಡು ಬಂದ ಅವಳು ಅಕಾರಣ ಆ ಮಗುವನ್ನೂ, ಗಂಡನನ್ನೂ ಶಾಶ್ವತವಾಗಿ ಕಳೆದುಕೊಂಡು ಎಲ್ಲದರಿಂದ ಮುಕ್ತಳಾದಂತಿದೆ. ಹೊಟ್ಟೆ ಇದೆ, ಅದಕ್ಕೆ ಕಾಲಕಾಲಕ್ಕೆ ಆಹಾರ ಬೇಕು. ಮರಳಿ ಬಿಹಾರದ ಮನೆ ಸೇರಬೇಕು. ಅದಕ್ಕೆ ಹಣ ಬೇಕು. ಗಂಡಸರ ಜೊತೆ ಮಲಗಿದರೆ ಅದು ಸಿಗುತ್ತದೆ. ಇಷ್ಟೇ ಅವಳಿಗೆ